ಸಿ.ಸಿ.8978-2023

ಪಿ.ಡಬ್ಲು-೧

ದಿ:12.03.2025 ರಂದು ಪಿರ್ಯಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು</u>**: ಆರೋಪಿ ಪರ ಶ್ರೀಯುತ ಕೆ.ಪಿ. ವಕೀಲರಿಂದ.

ನಾನು ಐ.ಟಿ.ಐ ವಿದ್ಯಾಭ್ಯಾಸ ಮಾಡಿ ವ್ಯಾಪಾರ ಮಾಡಿಕೊಂಡಿರುತ್ತೇನೆ. ನಾನು ತರಕಾರಿ ವ್ಯಾಪಾರವನ್ನು ಮಾಡಿಕೊಂಡಿರುತ್ತೇನೆ. ನನಗೆ ಸದರಿ ತರಕಾರಿ ವ್ಯಾಪಾರದಿಂದ ಮಾಸಿಕ ರೂ.50,000 ರಿಂದ 60,000/-ವರೆಗೆ ವರಮಾನ ಇದೆ. ಆ ರೀತಿ ನನಗೆ ತರಕಾರಿ ವ್ಯಾಪಾರದಿಂದ ಮಾಸಿಕ ರೂ.50,000 ರಿಂದ 60,000/-ವರೆಗೆ ವರಮಾನ ಇದೆ ಎಂದು ತೋರಿಸುವ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

2. ಆರೋಪಿ ನನ್ನ ಅಣ್ಣನ ಮಗ ಎಂದರೆ ಸರಿ. ನನ್ನ ಮತ್ತು ಆರೋಪಿಯ ಕುಟುಂಬ ಬೇರೆಯಾಗಿ ಸುಮಾರು 22 ವರ್ಷಗಳಾಗಿರುತ್ತದೆ. ಆರೋಪಿಯು ಊರಿನಲ್ಲಿ ವಾಸವಾಗಿರುತ್ತಾರೆ. ಆರೋಪಿಯು ತೋಟದ ಮನೆಯಲ್ಲಿ ವಾಸಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಮನೆ ತೋಟದ ಮನೆ ಅಗಿರುವುದಿಲ್ಲ ಮತ್ತು ನಾವು ಸಹೋದರರು ವಾಸದ ಸಲುವಾಗಿ ಒಟ್ಟು ಕುಟುಂಬದಲ್ಲಿದ್ದಾಗ ನಮ್ಮ ದೊಡ್ಡ ಅಣ್ಣನಾದ ರಾಜಪ್ಪರವರು ಕಟ್ಟಿಸಿದ ಮನೆ ಆಗಿರುತ್ತದೆ. ಸದರಿ ಆರೋಪಿಯು ವಾಸವಾಗಿರುವ ಮನೆ ಊರಿನ ಹೊರಭಾಗದಲ್ಲಿರುತ್ತದೆ ಎಂದರೆ ಸಾಕ್ಷಿಯು ಊರಿಗೆ ತಾಗಿಕೊಂಡಿರುತ್ತದೆ ಎಂದು ನುಡಿಯುತ್ತಾರೆ. 2021ನೇ ಸಾಲಿನಲ್ಲಿ ಆರೋಪಿಯು ವಿದ್ಯಾಭ್ಯಾಸ ಮಾಡಿಕೊಂಡು ಟ್ರಾಕ್ಟರ್ ಚಲಾಯಿಸುವ ಕೆಲಸ ಮಾಡಿಕೊಂಡಿದ್ದರು. ಸಾಕ್ಷಿಯು ಮುಂದುವರೆದು ಆರೋಪಿಯು ತರಕಾರಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡಿಕೊಂಡಿದ್ದರು ಮತ್ತು ಆ ರೀತಿ ಯಾವ ಸಾಲಿನಲ್ಲಿ ತರಕಾರಿ ಅಂಗಡಿ ಇಟ್ಟುಕೊಂಡಿದ್ದರು ಎಂದು ನನಗೆ ನೆನಪಿಲ್ಲ. 2021ನೇ ಸಾಲಿನಲ್ಲಿ ಆರೋಪಿಯು ಬಿ.ಕಾಂ ವಿದ್ಯಾಭ್ಯಾಸ ಮಾಡುತ್ತಿದ್ದು ಮತ್ತು ಯಾವುದೇ ವ್ಯಾಪಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನ ಅಣ್ಣನ ಒಬ್ಬನೇ ಮಗನಾಗಿರುತ್ತಾನೆ ಎಂದರೆ ಸರಿ. ನಾನು ಆರೋಪಿಯ ತಂದೆ ಮೃತಪಟ್ಟ ದಿನದಿಂದ ಆರೋಪಿ ಮತ್ತು ಆರೋಪಿ ಕುಟುಂಬದೊಂದಿಗೆ ದ್ವೇಷ ಸಾಧನೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ದ ಸುಳ್ಳು ಪೊಲೀಸ್ ದೂರುಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಯು ವಿದ್ಯಾರ್ಥಿ ಆಗಿದ್ದ ಸಮಯದಲ್ಲಿ ಆರೋಪಿಯ ವಿರುದ್ದ ಹಲವು ದೂರುಗಳನ್ನು ದಾಖಲಿಸಿ ತೊಂದರೆ ನೀಡುತ್ತಿದ್ದೆ ಎಂದರೆ ಸರಿಯಲ್ಲ.

3. 2022ನೇ ಸಾಲಿನಲ್ಲಿ ಆರೋಪಿಯು ನನ್ನ ಬಳಿ ಹಣ ಕೇಳಿರುತ್ತಾರೆ. ದಿ: 10.03.2022 ರಂದು ಆರೋಪಿಗೆ ಹಣ ನೀಡಿರುತ್ತೇನೆ. ಆ ರೀತಿ ಆರೋಪಿಯು ಯಾವ ನಿರ್ದಿಷ್ಟ ದಿನಾಂಕ ಮತ್ತು ತಿಂಗಳಿನಂದು ನನ್ನ ಬಳಿ ಹಣ ಕೇಳಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ದಿನ ಆರೋಪಿಯು ನನ್ನ ಬಳಿ ಹಣ ಕೇಳಲು ಬಂದಿದ್ದರು ಎಂದು ಹೇಳುವ ಸಮಯದಲ್ಲಿ ಆರೋಪಿಯೊಂದಿಗೆ ಬೇರೆ ಯಾರು ಬಂದಿರಲಿಲ್ಲ. ಸಾಮಾನ್ಯವಾಗಿ ಎರಡು ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ಬ್ಯಾಂಕ ಮೂಲಕ ಪಾವತಿಸಬೇಕಾಗುತ್ತದೆ ಎಂದರೆ ಸಾಕ್ಷಿಯು ಆರೋಪಿಯು ನನ್ನ ಅಣ್ಣನ ಮಗನಾದ ಮೇರೆಗೆ ಮತ್ತು ಆತನಿಗೆ ಹಣ ಜರೂರಾಗಿ ಬೇಕಾಗಿದೆ ಎಂದು ತಿಳಿಸಿದ ಮೇರೆಗೆ ನಗದು ಮೂಲಕ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ನೀಡಿದ್ದೇನೆ ಎಂದು ಹೇಳುವ ಹಣ ನನ್ನ ಬಳಿ ಇತ್ತು ತೋರಿಸುವ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಿನ ನಾನು ಆರೋಪಿಯ ಬಳಿ ಹಣ ಕೇಳಲು ಹೋಗಿದ್ದೆ ಎಂದು ಹೇಳುವ ಸಮಯದಲ್ಲಿ ಆರೋಪಿಯು ನನಗೆ ಹೊಡೆದು ಹಲ್ಲೆ ಮಾಡಿದ್ದ ಎಂದು ಸುಳ್ಳಾಗಿ ಕಾಣಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯು ವಿದ್ಯಾರ್ಥಿ ಆಗಿದ್ದ ಮೇರೆಗೆ ಆರೋಪಿಯ ವಿರುದ್ದ ಪೊ.ಠಾಣೆಗೆ ಸುಳ್ಳು ದೂರನ್ನು

ದಾಖಲಿಸಿ ಆರೋಪಿಗೆ ಹೆದರಿಸಿ ಆರೋಪಿ ಕಡೆಯಿಂದ 4 ಚೆಕ್ಕುಗಳನ್ನು ಬಲವಂತವಾಗಿ ಪೊಲೀಸರ ಮೂಲಕ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ವಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.